# ಕರ್ನಾಟಕವಿಧಾನಪರಿಷತ್ತು

| | | | |
|---|---|---|---|
| 1) | ಚುಕ್ಕೆಗುರುತಿನಪ್ರಶ್ನೆಸಂಖ್ಯೆ | : | 609 |
| 2) | ಸದಸ್ಯರಹೆಸರು | : | ಶ್ರೀ ಪ್ರಕಾಶ್ ಬಾಬಣ್ಣಾ ಹುಕ್ಕೇರಿ |
| 3) | ಉತ್ತರಿಸಬೇಕಾದದಿನಾಂಕ: | : | 11.07.2023 |
| 4) | ಉತ್ತರಿಸುವವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ-ಕುಡಚಿ ರೈಲ್ವೆ ಮಾರ್ಗದ ಕಾರ್ಯ ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು; ಸದರಿ ಕಾಮಗಾರಿಯ ಸದ್ಯದ ಭೌತಿಕ ಸ್ಥಿತಿಗತಿಗಳೇನು; | ಕುಡಚಿ- ಬಾಗಲಕೋಟೆ ರೈಲ್ವೆ ಮಾರ್ಗ ಯೋಜನೆ (142 ಕಿ.ಮೀ) ಯ ಕಾಮಗಾರಿಯ ವೆಚ್ಚದ ಶೇ.50 ರಷ್ಟು ಹಾಗೂ ಭೂಸ್ವಾಧೀನ ವೆಚ್ಚದ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸಲು ಒಪ್ಪಿಗೆ ನೀಡಿ ಈ ಯೋಜನೆಗೆ ರಾಜ್ಯ ಸರ್ಕಾರದಿಂದ 2011ರಲ್ಲಿ ಅನುಮೋದನೆ ನೀಡಲಾಗಿದೆ.<br><br>**<u>ಕಾಮಗಾರಿಯನ್ನು ನಿರ್ವಹಿಸುವ ನೈರುತ್ಯ ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಪ್ರಕಾರ ಈ ಯೋಜನೆಯ ಪ್ರಗತಿ ಈ ಕೆಳಕಂಡಂತಿದೆ.</u>**<br>1. ಈ ಯೋಜನೆಗೆ ಒಟ್ಟು 2517.39 ಎಕರೆ ಜಮೀನು ಅಗತ್ಯವಿದ್ದು, ಇದುವರೆಗೂ 2481.17 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಬಾಕಿ 21.15 ಎಕರೆ ಜಮೀನಿನ ಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ.<br>2. ಬಾಗಲಕೋಟೆ-ಖಜ್ಜಿಡೋಣಿ (30ಕಿ.ಮೀ) ಕಾಮಗಾರಿಯು 2018ರಲ್ಲಿ ಪೂರ್ಣಗೊಂಡಿದ್ದು, ರೈಲು ಸಂಚಾರ ಆರಂಭಗೊಂಡಿದೆ.<br>3. ಖಜ್ಜಿಡೋಣಿ-ಲೋಕಾಪುರ (9 ಕಿ.ಮೀ) ಸೆಕ್ಷನ್ ಕಾಮಗಾರಿಯು ಪ್ರಗತಿಯಲ್ಲಿದ್ದು, 2023ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.<br>4. ಲೋಕಾಪುರ–ಯಾದವಾಡ (21 ಕಿ.ಮೀ) ಸೆಕ್ಷನ್‌ನ ಕಾಮಗಾರಿಗಾಗಿ ಮೇ 2023ರಲ್ಲಿ ಟೆಂಡರ್ ನ್ನು ಕರೆಯಲಾಗಿದೆ.<br>5. ಯಾದವಾಡ-ಜಗದಾಲ್ ರಸ್ತೆ (45 ಕಿ.ಮೀ) ಸೆಕ್ಷನ್‌ನ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿಗಾಗಿ ರೈಲ್ವೆ ಇಲಾಖೆಯಿಂದ ಆಗಸ್ಟ್ 2023ರಲ್ಲಿ ಟೆಂಡರ್‌ನ್ನು ಕರೆಯಲು ನಿರ್ಧರಿಸಲಾಗಿದೆ.<br>6. ಜಗದಾಲ್ ರಸ್ತೆ- ಹರುಗೇರಿ-ಕುಡಚಿ (37 ಕಿ.ಮೀ) ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಜಮೀನು ಹಸ್ತಾಂತರವಾದ ನಂತರ ಕಾಮಗಾರಿಗಾಗಿ ಟೆಂಡರ್ ಕರೆಯಲಾಗುವುದು. |

. . 2)

<table>
<tr>
<td>ಆ)</td>
<td>ಈ ಕಾಮಗಾರಿಯ ಅಂದಾಜು ಮೊತ್ತ ಎಷ್ಟು; ಮಂಜೂರಾದ ಅನುದಾನ ಎಷ್ಟು; ಇದುವರೆಗೆ ಬಿಡುಗಡೆಯಾದ ಅನುದಾನ ಮತ್ತು ಖರ್ಚಾದ ಅನುದಾನ ಎಷ್ಟು;</td>
<td>
ಈ ಯೋಜನೆಯ ಮಂಜೂರಾದ ಅಂದಾಜು ವೆಚ್ಚ ರೂ.1530.09 ಕೋಟಿಗಳಾಗಿದ್ದು, (ಭೂಸ್ವಾಧೀನ ವೆಚ್ಚವನ್ನು ಹೊರತುಪಡಿಸಿ), ಇದರಲ್ಲಿ ರೈಲ್ವೆ ಇಲಾಖೆಯ ಪಾಲು ರೂ.926.31 ಕೋಟಿಗಳಾಗಿದ್ದು, ರಾಜ್ಯ ಸರ್ಕಾರದ ಪಾಲು ರೂ.603.78 ಕೋಟಿಗಳಾಗಿರುತ್ತದೆ.<br><br>
ಈ ಯೋಜನೆಗೆ ಬೇಕಾಗಿರುವ ಭೂಮಿಯನ್ನು ರಾಜ್ಯ ಸರ್ಕಾರದ ಪೂರ್ಣ ವೆಚ್ಚದಲ್ಲಿಯೇ ಭೂಸ್ವಾಧೀನಪಡಿಸಿಕೊಂಡು ರೈಲ್ವೆಗೆ ಉಚಿತವಾಗಿ ಹಸ್ತಾಂತರಿಸಲಾಗುತ್ತಿದೆ.<br><br>
➢ <u>ಭೂಸ್ವಾಧೀನ ಪರಿಹಾರಕ್ಕಾಗಿ ರಾಜ್ಯ ಸರ್ಕಾರದಿಂದ ಒದಗಿಸಿದ ಅನುದಾನದ ವಿವರ:-</u><br><br>
(ರೂ.ಕೋಟಿಗಳಲ್ಲಿ)
<table>
<tr><th>ಜಿಲ್ಲಾಡಳಿತ</th><th>ಬಿಡುಗಡೆಯಾದ ಮೊತ್ತ</th><th>ವೆಚ್ಚವಾದ ಮೊತ್ತ</th></tr>
<tr><td>ಬೆಳಗಾವಿ</td><td>191.98</td><td>130.08</td></tr>
<tr><td>ಬಾಗಲಕೋಟೆ</td><td>395.67</td><td>395. 67</td></tr>
<tr><td>ಒಟ್ಟು</td><td>587.65</td><td>525.75</td></tr>
</table>
➢ <u>ನಿರ್ಮಾಣ ಕಾಮಗಾರಿಗಾಗಿ ರಾಜ್ಯ ಸರ್ಕಾರ ಹಾಗೂ ರೈಲ್ವೆ ಇಲಾಖೆಯಿಂದ ಒದಗಿಸಿರುವ ಅನುದಾನದ ವಿವರ:-</u><br>
(ರೂ.ಕೋಟಿಗಳಲ್ಲಿ)
<table>
<tr><th>ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಮೊತ್ತ</th><th>ನೈರುತ್ಯ ರೈಲ್ವೆಯಿಂದ ಬಿಡುಗಡೆಯಾದ ಮೊತ್ತ</th><th>ಒಟ್ಟು</th><th>ವೆಚ್ಚ</th></tr>
<tr><td>195.65</td><td>669.00</td><td>864.6</td><td>353.5</td></tr>
</table>
</td>
</tr>
<tr>
<td>ಇ)</td>
<td>ಸದರಿ ರೈಲು ಮಾರ್ಗದ ಕಾಮಗಾರಿಯು ಅತ್ಯಂತ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ; ಕಾಮಗಾರಿ ವಿಳಂಬಕ್ಕೆ ಕಾರಣಗಳೇನು; ಇದಕ್ಕೆ ಹೊಣೆಗಾರರು ಯಾರು;</td>
<td>
ನೈರುತ್ಯ ರೈಲ್ವೆ ಇಲಾಖೆಯಿಂದ ಪಡೆದ ಮಾಹಿತಿ ಪ್ರಕಾರ ಈ ಕೆಳಕಂಡ ಕಾರಣಗಳಿಂದ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.<br><br>
1) ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರ ಒತ್ತಾಯದ ಮೇರೆಗೆ ಬಾಗಲಕೋಟೆ ಜಿಲ್ಲೆಯ ಲೋಕಾಪುರ ಬಳಿಯ ಹಳಿಯ ಮಾರ್ಗ (ಅಲೈನ್‌ಮೆಂಟ್)ವನ್ನು 3 ಬಾರಿ ಮಾರ್ಪಡಿಸಿರುವುದು ಹಾಗೂ ಗಣಿ ಮಾಲೀಕರು ನೀಡಿರುವ ಕೋರಿಕೆಯ ಮೇರೆಗೆ ಲೋಕಾಪುರ ಬಳಿ ಖಜ್ಜಿದೋಣಿ-ಯಾದವಾಡ ನಡುವಿನ ಸುಣ್ಣದ ಕಲ್ಲು ಮತ್ತು ಡಾಲಮೈಟ್ ಗಣಿಗಳನ್ನು ಹಾದು ಹೋಗುತ್ತಿದ್ದು, ಇದನ್ನು ತಪ್ಪಿಸಲು ಸುಮಾರು 2.1/2 ವರ್ಷಗಳು ವಿಳಂಬವಾಗಿರುತ್ತದೆ.<br>
2) 2013 ರಲ್ಲಿ ಜಾರಿಯಾದ ನೂತನ ಭೂಸ್ವಾಧೀನ ಕಾಯ್ದೆಯನುಸಾರ ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಬೇಕಾಗಿರುವುದರಿಂದ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಕುರಿತಂತೆ ನ್ಯಾಯಾಲಯಗಳಲ್ಲಿ ಹೂಡಲಾಗುವ ಮೊಕದ್ದಮೆಗಳಿಂದ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗುತ್ತದೆ.
</td>
</tr>
</table>

. . .3)

| | | |
|---|---|---|
| ಈ) | ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರಣೆ ನೀಡುವುದು) | 1) ರಾಜ್ಯ ಸರ್ಕಾರದಿಂದ ಈ ನೂತನ ರೈಲು ಮಾರ್ಗದ ಕ್ಷಿಪ್ರ ಅನುಷ್ಠಾನಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಂಡು ಶೇಕಡ 95% ಕ್ಕೂ ಹೆಚ್ಚು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.<br>2) ನೈರುತ್ಯ ರೈಲ್ವೆಯು ಬಾಗಲಕೋಟೆ-ಖಜ್ಜಿಡೋಣಿ ನಡುವಿನ 30 ಕಿ.ಮೀ ಕಾಮಗಾರಿಯನ್ನು ಪೂರ್ಣಗೊಳಿಸಿ, ಖಜ್ಜಿಡೋಣಿ-ಲೋಕಾಪುರ (9 ಕಿ.ಮೀ) ಸೆಕ್ಷನ್‌ನ ಕಾಮಗಾರಿಯನ್ನು 2023ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.<br>3) ಲೋಕಾಪುರ–ಯಾದವಾಡ (21 ಕಿ.ಮೀ) ಸೆಕ್ಷನ್‌ನ ಕಾಮಗಾರಿಗಾಗಿ ಟೆಂಡರ್‌ನ್ನು ಕರೆಯಲಾಗಿದ್ದು, ಯಾದವಾಡ-ಜಗದಾಲ್ ರಸ್ತೆ (45 ಕಿ.ಮೀ) ಸೆಕ್ಷನ್ ಟೆಂಡರ್ ಅನ್ನು ಆಗಸ್ಟ್ 2023ರಲ್ಲಿ ಕರೆಯಲು ನಿರ್ಧರಿಸಲಾಗಿದೆ.<br>4) ಜಗದಾಲ್ ರಸ್ತೆ-ಹರುಗೇರಿ- ಕುಡಚಿ (37 ಕಿ.ಮೀ) ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಜಮೀನ ಹಸ್ತಾಂತರವಾದ ನಂತರ ಕಾಮಗಾರಿಗಾಗಿ ಟೆಂಡರ್ ಕರೆಯಲಾಗುವುದು.<br>5) ಈ ಯೋಜನೆಯಲ್ಲಿ ಒಟ್ಟು 74-36 ಎಕರೆಗಳ ನ್ಯಾಯಾಲಯಗಳ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠವು ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುತ್ತಿದೆ.<br>6) ಈ ಯೋಜನೆಗಳನ್ನು ನಿಗಧಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಪರ ಮುಖ್ಯಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ನೇತೃತ್ವದಲ್ಲಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಗುತ್ತಿದೆ ಹಾಗೂ ಯೋಜನೆಗಳ ಅನುಷ್ಠಾನಕ್ಕಾಗಿ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಸೂಕ್ತ ನಿರ್ದೇಶನ ನೀಡಲಾಗುತ್ತಿದೆ.<br><br>ಈ ಯೋಜನೆಯನ್ನು 2027ರೊಳಗೆ ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದೆ. |

ಸಂಖ್ಯೆ: ಮೂಅಇ 136 ರಾರಾಹೆ 2023

(ಎಂ.ಬಿ.ಪಾಟೀಲ)
ಬೃಹತ್ ಮತ್ತುಮಧ್ಯಮಕೈಗಾರಿಕೆಹಾಗೂ
ಮೂಲಸೌಲಭ್ಯಅಭಿವೃದ್ಧಿಇಲಾಖೆಸಚಿವರು